ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:2172/2023
ಸಿ.ಡಬ್ಲ್ಯು 2 ಪಿ.ಡಬ್ಲೂ :5

| | |
|---|---|
| ಸಾಕ್ಷಿದಾರರ ಹೆಸರು | ಗೋಪಾಲಕೃಷ್ಣ ಶೆಣೈ |
| ತಂದೆಯ ಹೆಸರು | ವೆಂಕಟೇಶ |
| ವಯಸ್ಸು | 75 ವರ್ಷ |
| ಉದ್ಯೋಗ | ಇಲ್ಲ |
| ವಾಸಸ್ಥಳ | ಎರ್ಮಾಳು |

ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಸುಮಾರು 20 ವರುಷಗಳ ಹಿಂದೆ ನಮ್ಮ ಮನೆಯಲ್ಲಿ ಚಿನ್ನ , ಬೆಳ್ಳಿ ಮತ್ತು ಹಣ ಕಳ್ಳತನವಾಗಿತ್ತು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದು ಅವರು ಮರುದಿನ ಬಂದು ಕೆಲವು ದಾಖಲಾತಿಗಳಿಗೆ ಸಹಿ ಪಡೆದುಕೊಂಡು ಹೋಗಿರುತ್ತಾರೆ. ಆ ದಾಖಲಾತಿಗಳಲ್ಲಿ ಏನು ಬರೆಯಲಾಗಿದೆ ಎಂದು ಈಗ ನನಗೆ ನೆನಪಿಲ್ಲ. ಕಳ್ಳತನ ಆದ ಚಿನ್ನಾಭರಣಗಳನ್ನು ನ್ಯಾಯಾಲಯದ ಮುಖೇನ ಬಿಡಿಸಿಕೊಂಡಿರುತ್ತೇನೆ. ನಂತರ ಬರ್ಕೆ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡಿರುತ್ತಾರೆ. ಅಲ್ಲಿ ನಮ್ಮ ಮನೆಯಲ್ಲಿ ಕಳ್ಳತನವಾದ ಚಿನ್ನಭರಣಗಳನ್ನು ನೋಡಿ ಗುರುತಿಸಿರುತ್ತೇನೆ. ನಂತರ ಮಣಿಪಾಲ ವೃತ್ತ ಕಚೇರಿಯಲ್ಲಿ ಆರೋಪಿಯನ್ನು ತೋರಿಸಿರುತ್ತಾರೆ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ನಂತರ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು. ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ

ಗುರುತಿಸಿದ್ದು ಅದನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 1 ರಿಂದ 3 ತೋರಿಸಲಾಗಿ ಅವುಗಳಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 1(ಬಿ) , 2(ಬಿ), 3(ಬಿ) ಎಂದು ಗುರುತಿಸಲಾಯಿತು. ನಿಪಿ 1 ರಿಂದ 3 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿ ಕೂಲ ಸಾಕ್ಷಿ ಎಂದು ತಿಳಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ ನೀಡಲಾಯಿತು.**

ದಿಃ 22-04-2004 ರಂದು ನಮ್ಮ ಮನಗೆ ಬೀಗ ಹಾಕಿ ಬೀಗದ ಕೀಯನ್ನು ಕಿಟಕಿಯ ಸಂದಿಯಲ್ಲಿ ಇಟ್ಟು ದೇವಸ್ಥಾನಕ್ಕೆ ಹೋಗಿದ್ದವು ಎಂದರೆ ಸರಿ. ನಂತರ ರಾತ್ರಿ 10.00 ಗಂಟೆಗೆ ನಾನು ಮತ್ತು ನನ್ನ ಹೆಂಡತಿ ಮನೆಗೆ ಬಂದು ಕೀ ಹುಡುಕಿದಾಗ ಕೀ ಸಿಗಲಿಲ್ಲ. ನಂತರ ಮನೆಯ ಬೀಗ ಹಾಕಿದ ಸ್ಥಿತಿಯಲ್ಲೇ ಇತ್ತು ಎಂದರೆ ಸರಿ. ನಂತರ ನಾವು ಮನೆಯ ಪೂರ್ವ ದಿಕ್ಕಿನ ಹಿಂಭಾಗಿಲಿನ ಮೂಲಕ ಒಳ ಬದಿಯ ಚಿಲಕವನ್ನು ಕೋಲಿನ ಸಹಾಯದಿಂದ ತೆಗೆದು ಒಳ ಪ್ರವೇಶಿಸಲು ನೋಡಿದಾಗ 10 ಚಿನ್ನಾಭರಣಗಳು 2 ಬೆಳ್ಳಿ ಆಭರಣಗಳು , 3 ಸಾವಿರ ನಗದು ಹಣ ಹಾಗೂ ದೇವರ ಹುಂಡಿಯಲ್ಲಿದ್ದ 200 ರೂ ಹಣ ಹಾಗೂ ಒಂದು ಬ್ಯಾಟರಿ ಕಳ್ಳತನ ಆಗಿತ್ತು ಎಂದರೆ ಸರಿ. ನಿಪಿ 7 ರಂತೆ ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ.

ದಿಃ 23-04-2004 ರಂದು ಬೆಳಿಗ್ಗೆ 10.30 ಗಂಟೆಯಿಂದ 12.00 ಗಂಟೆಯವರೆಗೆ ಚಾಸಾ 9 ಮತ್ತು 10 ರವರ ಸಮಕ್ಷಮ ನಾನು ತಕ್ಷೀರು ಸ್ಥಳ ತೋರಿಸಿದ ಮೇರೆಗೆ ನಿಪಿ 1 ರಂತೆ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ನಂತರ ದಿಃ 23-08-2005 ಕ್ಕೆ ನನ್ನನ್ನು ಠಾಣೆಗೆ ಕರೆಸಿ ಮಂಗಳೂರು ಪೊಲೀಸರು ವಶಪಡಿಸಿಕೊಂಡ ನನ್ನ ಚಿನ್ನಗಳ ಪೈಕಿ 7 ಚಿನ್ನಾಭರಣಗಳನ್ನು ಪಡುಬಿದ್ರಿ ಪೊಲೀಸ್ ಠಾಣೆಗೆ ಹಾಜರು ಪಡಿಸಿದರು. ಅವುಗಳನ್ನು ಪೊಲೀಸರು ವಶಪಡಿಕೊಂಡಿರುತ್ತಾರೆ ಎಂದರೆ ಸರಿ. ನಾನು ಆ ಸಮಯದಲ್ಲಿ ಹಾಜರಿದ್ದು ಆ ಚಿನ್ನಾಭರಣಗಳನ್ನು ಗುರುತಿಸಿರುತ್ತೇನೆ ಎಂದರೆ ಸರಿ. ನಂತರ 09-09-2005 ರಂದು ಮಣಿಕಂಠ ಹಾಗೂ ಸುದರ್ಶನ ಎಂಬ ಆರೋಪಿತರು ತಾವು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ ಪ್ರಕಾರ ನಿಪಿ 2 ರಂತೆ ಮಹಜರು ಮಾಡಿರುತ್ತಾರೆ ಎಂದರೆ ಸರಿ. ಆ ದಿನ ತೋರಿಸಿದ ಮಣಿಕಂಠ ನ್ಯಾಯಾಲಯದ ಮುಂದಿರುವ ಆರೋಪಿ ಇವರೇ ಎಂದು ನುಡಿಯುತ್ತಾರೆ. ಅದೇ ದಿನ ಆರೋಪಿತರನ್ನು ಗುರುತಿಸಿದ ಬಗ್ಗೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

(ಈ ಹಂತದಲ್ಲಿ ಚಿನ್ನಾಭರಣಗಳನ್ನು ಹಾಜರು ಪಡಿಸದೇ ಇರುವ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.